ಯುದ್ಧಗಳಲ್ಲಿ ದೇಹಗಳು ಬಲಿಯಾದರಿಲ್ಲಿ ಹೃದಯಗಳ ಬಲಿ. ಸತ್ತ ದೇಹವಾದರೂ ಗೋರಿ ಸೇರಿ ಶಾಂತವಾಗುತ್ತದೆ. ಇಲ್ಲಿ ಗೋರಿಯಾದ ಭಾವನೆಗಳ ಶವ ಹೊತ್ತ ಜೀವ ಅಡ್ಡಾಡುತ್ತದೆ. ಅಷ್ಟೇ ವ್ಯತ್ಯಾಸ. ನಾನೊಬ್ಬ ಲೋಫರ್ ಅನ್ನೋ ಭಾವನೆ ಮೂಡಿದ್ದರೆ ಅಚ್ಚರಿಯಿಲ್ಲ. ಯಾರನ್ನೂ ಪ್ರೇಮಿಸದೆ ಇರೋನು ಲೋಫರ್ ಅನ್ನೋದು ನನ್ನ ಭಾವಅನುಭಾವ.

ಹೇಗೆ ಹೇಳಿದರೆ ನಿನಗರ್ಥವಾಗಬಹುದೆ ಹುಡುಗಿ? ನನ್ನ ಆಳವಾದ ಪ್ರೇಮದ ಬಗ್ಗೆ ವರ್ಣಿಸಲೆ? ಹಾಳಾದ ಪ್ರೇಮದ ಕುರಿತು ವಿಷಾದಿಸಲೆ? ಏನೇ ವಿವರಿಸಹೊರಟರೂ 'ಹೆಣ್ಣು' ವಸ್ತುವಾಗಿ ಬಿಡುತ್ತಾಳೆಂಬುದು ನನ್ನ ವೀಕ್‌ನೆಸ್ಸೋ ಸ್ಟ್ರೆಂಥೋ ನನಗೂ ಅನೂಹ್ಯ. 'ಅವಳೂ' ತುಂಬಾ ಕೆಟ್ಟವಳೇನಲ್ಲ. ಸಂಗೀತಕ್ಕೆ ಮನಸೋಲದವರಾದರೂ ಯಾರು ಎನ್ನುತ್ತಲೇ ಸನಿಹವಾದವಳು. ಆಗೆಲ್ಲಾ ಆರ್ಕೆಸ್ಟ್ರಾದಲ್ಲಿ ಹಾಡುತ್ತಾ ಕುಣಿವ ನನ್ನಂಥ ಸಾಮಾನ್ಯನನ್ನು ಭೂತ ಬಂಗಲೆಯಂತಹ ಭಾರಿ ಬಂಗಲೆಯ ಒಡತಿ, ಚಂದನದ ಗೊಂಬೆಗಿಂತಲೂ ಸಾಫ್ಟ್ ಆದವಳು ಪ್ರೇಮಿಸುತ್ತಿದ್ದಳೆಂದಾಗ ನನಗೇ ನಂಬಲಾಗದ ಕೀಳರಿಮೆ. ಚಂದನದ ಗೊಂಬೆಗೆ ಅವರಮ್ಮನೇ ಖಾಸಾ ಗೆಳತಿ. ಎಷ್ಟೋ ಸಲ ಅವರಮ್ಮನನ್ನು ಕರೆದುಕೊಂಡೇ ನನ್ನನ್ನು ನೋಡಲು ಕಾರಿನಲ್ಲಿ ಬರೋಳು. ನಮ್ಮ ಇಡೀ ಮನೆ ಅವರ ಕಾರಿಡಾರಿಗಿಂತಲೂ ಚಿಕ್ಕದು. ನನ್ನಮ್ಮಂಗೋ ಇವರನ್ನು ಕಂಡರೇನೆ ಆಗದು. ನಮ್ಮ ಮನೆ ಕಾಫಿ ಇವರಿಗೆಲ್ಲಾ ಹಿಡಿಸುತ್ತೇನೋ ಅಂತ ಮುನಿಯುತ್ತಿದ್ದಳು. ಇವರೋ ಬಂದಾಗಲೆಲ್ಲಾ ಸಿಹಿ ತರೋರು. 'ಇದೆಲ್ಲಾ ಯಾಕೆ ತರ್ತೀರಾ ವೇಸ್ಟು. ನಾವು ಹಬ್ಬದಾಗಷ್ಟೆ ಸಿಹಿ ತಿನ್ನೋರು' ಅಂತ ಅಮ್ಮನ ಅಸಹನೆ. ಮೋಸಂಬಿ, ಕಿತ್ತಲೆ, ಬ್ರೆಡ್ಡು ಹಿಡಿದವರು ಬಂದರೆ, 'ಇಲ್ಲಿ ಯಾರೂ ಕಾಯಿಲೆ ಬಿದ್ದವರೆ' ಎಂಬ ಒಗ್ಗರಣೆ. ಹುಡುಗಿ ನಕ್ಕರೂ, ಮಾತನಾಡಿದರೂ, ಮೌನವಾಗಿದ್ದರೂ ಅಮ್ಮ ಸಹಿಸಳು. ಆಗೆಲ್ಲಾ ನನ್ನ ಪಾಲಿಗೆ ಅಮ್ಮನೇ ಶತ್ರುವಂತೆ ಭಾಸ. ಹುಡುಗಿಯ ಮೋಹಕ್ಕೆ ಸೆರೆಯಾಗುವ ಅರಿವಿಲ್ಲದೆ ಪುಂಗಿಯ ಮೋಡಿಗೆ ತಲೆದೂಗುವ ನಾಗಸರ್ಪದಂತೆ, ದೀಪದ ಬೆಳಕನ್ನೇ ಅಪ್ಪಲೆತ್ನಿಸುವ ಪತಂಗದ ಪಾಡು ನನ್ನದು.

ಪ್ರತಿವಾರವೂ ಮುನ್ಸಿಪಲ್ ಉದ್ಯಾನದಲ್ಲಿ ನಡೆವ ನಮ್ಮ ಆರ್ಕೆಸ್ಟ್ರಾ ಪ್ರೋಗ್ರಾಂನ ಪ್ರಾಯೋಜಕತ್ವ ನಗರಸಭೆಯದ್ದೇ. ಬಿಟ್ಟಿ ಪ್ರೋಗ್ರಾಮ್‌ಗೆ ಜನವೋ ಜನ. ಅವಳೂ ತಪ್ಪದೆ ತಾಯಿಯೊಂದಿಗೆ ಹಾಜರ್. ಆ ಸ್ಫೂರ್ತಿಯಿಂದಲೇ ಇವಳ ಚೆಲುವನ್ನೇ ಬಣ್ಣಿಸಿ ಕವನ ಹೊಸೆದು ಸ್ವರ ಹಾಕಿ ಹಾಡುತ್ತಿದ್ದೆ. ಅದಕ್ಕವಳ ಬೆಳದಿಂಗಳಂತಹ ನಗೆಯೇ ಸಂಭಾವನೆ. ಊರೆಲ್ಲಾ ಹಾಡಿ ಹೊಗಳಿದರೂ ಇವಳ ಮಲ್ಲಿಗೆ ಮೊಗ್ಗಿನಂತಹ ಶ್ವೇತದಂತಗಳನ್ನರಳಿಸಿ ಹೇಳುವ ಒಂದು 'ಥ್ಯಾಂಕ್ಸ್'ಗಾಗಿ ಕಾದು ನಿಲ್ಲುವ ಕನಕ ನಾನು. ಅವಳನ್ನು ಯಾವನೋ ಒಬ್ಬ ಧಾಂಡಿಗ ಚುಡಾಯಿಸುತ್ತಿದ್ದಾನೆಂದವಳು ನೊಂದಾಗ ಸಿನಿಮಾ ಹೀರೋ ಮಾದರಿ ಅಟ್ಯಾಕ್ ಮಾಡಿ ಮೂಳೆ ಜಖಂ ಮಾಡಿಕೊಂಡು ಆಸ್ಪತ್ರೆಗೆ ದಾಖಲಾದದ್ದೂ ಉಂಟು. ನನ್ನನ್ನು ನೋಡಲೆಂದು ಅವಳೂ ಅವಳಮ್ಮ ಕಾರಲ್ಲಿ ಹಣ್ಣಿನ ಬುಟ್ಟಿ ಹಿಡಿದು ಬರುವಾಗ ಸ್ವರ್ಗ ಮೂರೇ ಗೇಣು. ಆಸ್ಪತ್ರೆಯಿಂದ ಎರಡು ದಿನಕ್ಕೆ ಡಿಸ್‌ಚಾರ್ಜ್ ಆದಾಗ ಆನಂದಕ್ಕಿಂತ ಮಲ್ಟಿ ಫ್ರಾಕ್ಚರ್ ಆಗಿದ್ದರೆ ತಿಂಗಳುಗಟ್ಟಲೆ ಇರಬಹುದಿತ್ತಲ್ಲವೆಂದು ಪೇಚಾಡಿದ್ದೆ. ದಿನವೂ ಊಟದ ಡಬ್ಬಿ ಹಿಡಿದು ಬಿಸಿಲಲ್ಲಿ ಆಸ್ಪತ್ರೆಗೆ ಎಡತಾಕುವ ಅಮ್ಮನ ಬಗ್ಗೆ ಯೋಚಿಸಿದ್ದೇ ಇಲ್ಲ. ಇನ್ನೊಂದು 'ಫ್ಲಾಶ್ ಬ್ಲಾಕ್' ಹೇಳಿ ಬಿಡುತ್ತೇನೆ ಕಣೆ.

***

ಒಮ್ಮೆ ಪಿಕ್‌ನಿಕ್‌ಗೆಂದು ದೂರದ ಹಿಮವದ್ ಕೇದಾರಕ್ಕೆ ಹೋಗಿದ್ದೆವು. ಕಾಡಿನ ನಡುವೆ ಬಂಡೆಗಳ ನಡುವಿರುವ ಕಲ್ಲಿನ ಬಸವನ ಬಾಯಲ್ಲಿ ನೀರು ಹರಿದು ಬರುವುದನ್ನು ನೋಡುವುದೇ ಒಂದು ಸೌಭಾಗ್ಯ. ಮಳೆಗಾಲದಲ್ಲಿ ಪುಟ್ಟ ಹೊಳೆಯಂತೆ ಹರಿವ ನೀರಲ್ಲಿ ಮೀಯುತ್ತಾ ಎರಚಾಡುತ್ತಾ ಆಡುವ ಒಂದೊಂದು ಕ್ಷಣಗಳೂ ಅವರ್ಣನೀಯ. ಅಲ್ಲಿಯೇ ಬಿಸಿಬೇಳೆಬಾತ್, ಮೊಸರನ್ನ ಮಾಡಿ ಪಟ್ಟಾಗಿ ಹೊಡೆದು ಹಿಂದಿರುಗುವಾಗ ರಾತ್ರಿ ಏಳಾಗಿತ್ತು. ಕಾಡಿನ ಹಾದಿಯೇ ಸನಿಹವೆಂದು ಆರಿಸಿಕೊಂಡು ದಾಪುಗಾಲು ಇಡುತ್ತಾ ತಿಮ್ಮಣ್ಣನಾಯಕನ ಕೆರೆ ಬಳಿ ಬಂದಾಗ ತಂಪಾದ ಮೋಹಕ ಗಾಳಿ, ಅವಳ ಸೆರಗಿನ ಗಾಳಿ ಮಿಕ್ಸ್ ಆಗಿ ಒಂಥರಾ ಥ್ರಿಲ್ಲು. ಕೈ ಹಿಡಿದೆ. ಅವಳಿಂದ ಬಯಸಿದ ರಿಯಾಕ್ಷನ್ನೇ ಇಲ್ಲ! 'ರೀ ನನ್ನ ವಾಚು... ರಿಸ್ಟ್ ವಾಚ್ ಎಲ್ಲೋ ಬಿದ್ದು ಹೋಗಿದೆ' ಗಾಬರಿ ಬಿದ್ದು ಹುಯಿಲೆಬ್ಬಿಸಿದಳು. 'ರೀ, ಡ್ಯಾಡಿ ನನ್ನ ಬರ್ತಡೇಗೆಂದು ಪ್ರೆಸೆಂಟ್ ಮಾಡಿ ತಿಂಗಳೂ ಆಗಿಲ್ಲ. ರೋಲೆಕ್ಸ್, ಫಾರಿನ್ ಬ್ರಾಂಡು ಕಣ್ರಿ' ಎಂದು ಕಣ್ಣೀರು ಹಾಕಿದ್ದಳು. 'ನಿಮ್ಮಪ್ಪ ಕರೆಪ್ಷನ್ ಕಿಂಗ್. ಮತ್ತೆ ಕೊಡಿಸುತ್ತಾನೆ ಬಿಡು' ಅಂತ ನಾನಂದಾಗ, ಅವಳ ಗೆಳತಿಯರೂ 'ಡೋಂಟ್‌ವರಿ ಕಣೆ... ಇವನು ಹೇಳೋದೂ ನಿಜವೆ' ಎಂದು ಕಿಸಕ್ಕೆಂದರು.

ರಾತ್ರಿಯ ಊಟ ಮುಗಿಸಿ ಮಲಗಿದಾಗ ಅವಳ ಬಾಡಿದ ಮುಖವೇ ಕಂಡಾಗ ಮನಸ್ಸಿಗೆಲ್ಲಿಯ ನೆಮ್ಮದಿ. ಹೊದ್ದಿಕೆ ಎಸೆದು ಕೈಲಿ ಟಾರ್ಚ್ ಹಿಡಿದು ಹೊರಟೆ. 'ಎಲ್ಲಿಗೋ ಇಷ್ಟು ಹೊತ್ತಲ್ಲಿ?' ಅಮ್ಮನ ತನಿಖೆ. 'ಬಾಗಿಲು ಹಾಕ್ಕೋ... ಬಂದೆ' ಎಂದವನೇ ಕಾಡಿನತ್ತ ದಾಪುಗಾಲು ಹಾಕಿದೆ.

ತಿಮ್ಮಣ್ಣನಾಯಕನ ಕೆರೆ ದಾಟಿ ಚಿರತೆಕಲ್ಲು ಬಳಿ ಬಂದಾಗ ಭಯಕ್ಕೋ ಏನೋ ಬನಿಯನ್ ಪೂರಾ ಚಳಿಯಲ್ಲೂ ಒದ್ದೆ ಮುದ್ದೆ. ಟಾರ್ಚ್‌ನ ಬೆಳಕು ದಟ್ಟ ಕಾಡಿನ ಕತ್ತಲನ್ನು ಬೆಳಗಿಸೀತೆ? ಮಿಡತೆಗಳ ಕಿಂವ್ ಕಿಂವ್ ನಾದ. ಯಾವುದೋ ಪ್ರಾಣಿಗಳ ಅಸ್ಪಷ್ಟ ಕೂಗು. ನನ್ನನ್ನೇ ಹಿಂಬಾಲಿಸಿ ಪಕ್ಕದಲ್ಲೇ ತೆವಳುತ್ತಾ ಬರುತ್ತಿರುವ ನನ್ನದೇ ನೆರಳೂ ಭಯ ಹುಟ್ಟಿಸಿತು. ಕಾಡಿನ ಏನೆಲ್ಲಾ ಸದ್ದಿನಲ್ಲೂ ಹೆಪ್ಪುಗಟ್ಟಿಸುವಂತಹ ಮೌನ ಆಳುತ್ತಲಿತ್ತು. ಎಡವುತ್ತಾ ಮುಗ್ಗರಿಸುತ್ತಾ ಒಳದಾರಿಯಲ್ಲಿ ಹಿಮವದ್ ಕೇದಾರ (ವಜ್ರ) ತಲುಪಿದೆ. ಹಗಲಲ್ಲಿ ರಮ್ಯ ಮನೋಹರ ತಾಣವೀಗ ರೌದ್ರ ಮನೋಹರ. ಏನನ್ನೂ ಆಸ್ವಾದಿಸದೇ ವಾಚ್‌ಗಾಗಿ ಎಲ್ಲೆಲ್ಲೋ ಬೆಳಕು ಚೆಲ್ಲಿ ಹಪಹಪಿಸುತ್ತಾ, ವಾಚ್ ಸಿಕ್ಕರೆ ಆಡುಮಲ್ಲೇಶ್ವರನಿಗೆ ಕಾಯಿ ಒಡೆಸುವ ಹರಕೆ ಹೊತ್ತು ಬೆದಕಾಡಿದೆ. ಒಲೆಗೆಂದು ಹೂಡಿದ್ದ ಕಲ್ಲುಗಳ ಪಕ್ಕದಲ್ಲೇ ಮಿನುಗುತ್ತಾ ಟಿಕಿಟಿಕಿಸುತ್ತಾ ಪವಡಿಸಿದೆ! ಬಾಚಿ ಎದೆಗೊತ್ತಿಕೊಂಡಾಗ ಎಂತದೋ ಕಂಪನ. ರೋಮಾಂಚನ ಅಂತಾರಲ್ಲ ಅದೇ ಇದ್ದೀತು. ಮೈ ರೋಮಗಳೆಲ್ಲಾ ನಿಮಿರಿನಿಂತಿವೆ. ವಾಚು ರಾತ್ರಿ ಒಂದು ಗಂಟೆ ತೋರಿ ನಕ್ಕಿತು. ಜೇಬಲ್ಲಿರಿಸಿ ಓಟಕಿತ್ತೆ. ಬಂದಾಗ ಇದ್ದ ಧೈರ್ಯವೆಲ್ಲಾ ಖಾಲಿಯಾದ್ದರಿಂದ ಒಂದೇ ಸಮನೆ ಓಡಿ ಊರು ಸೇರಿದ ಮೇಲೆಯೇ ಸರಿಯಾಗಿ ಉಸಿರಾಡಿದ್ದು.

ಬೆಳಿಗ್ಗೆಯೇ ಅವಳ ಮನೆಗೆ ಓಡಿ ಅವಳಿಗೊಪ್ಪಿಸಿ ಅವಳಮ್ಮನ ಹಾರ್ಲಿಕ್ಸ್ ಕುಡಿದು ಸಾಮ್ರಾಜ್ಯವನ್ನೇ ಗೆದ್ದ ಅಲೆಕ್ಸಾಂಡರ್‌ನಂತೆ ಪೋಜ್ ಕೊಟ್ಟೆ. ಸಂಜೆ ಸಿಕ್ಕ ಅವಳು ಹೇಳಿದ ಮಾತು ಕೇಳಿದಾಗ ಇದುವರೆಗೂ ಕೂಡಿಟ್ಟಿದ್ದ ಆನಂದವೆಲ್ಲಾ ಬಿಸಿಲಿಗಿಟ್ಟ ಮಂಜಿನಂತಾಗಿತ್ತು. 'ಕಾಡಿನಲ್ಲಿ ರಾತ್ರಿ ಅಡ್ವೆಂಚರ್ ಮಾಡಿದ್ನಂತಾ? ಬುಲ್‌ಶಿಟ್, ಇವನೇ ಕದ್ದು ಇಟ್ಕೊಂಡಿರ್ತಾನೆ. ದಕ್ಕಿಸಿಕೊಳ್ಳೋ ಧೈರ್ಯ ಸಾಲದೆ ವಾಪಾಸ್ ಮಾಡಿ ಹೀಗೆಲ್ಲಾ ಕಥೆ ಹೊಡಿತಿದಾನೆ ಕಣೆ' ಅಂದರಂತೆ ಅವಳ ಗೆಳತಿಯರು.

'ಹೋಗ್ಲಿಬಿಡು. ನಿನಗೇನನ್ನಿಸಿತು ಹೇಳು?' ಹಿಡಿಯಷ್ಟಾಗಿ ಪ್ರಶ್ನಿಸಿದ್ದೆ.

'ಸಿಗ್ತಲ್ಲ... ಹೋಗ್ಲಿಬಿಡು' ಅಂದವಳೇ ಮುಖ ಸಹ ನೋಡದೆ ಜಾರಿಕೊಂಡಿದ್ದಳು. ಎಂದಿನಂತೆ ಪ್ರೋಗ್ರಾಮ್‌ಗೆ ಬಂದು ಹೋಗುತ್ತಿದ್ದುದ್ದರಿಂದ ನಾನೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಆದರೂ ನನ್ನಂತಹ ಬಡಪಾಯಿಯನ್ನು ಅವಳೇಕೆ ಮೆಚ್ಚಿಕೊಂಡಳೋ ಎಂಬ ಬಗ್ಗೆ ಒಳಗೇ ರಿಸರ್ಚ್ ಮಾಡಹತ್ತಿದ್ದೆ. ಕಾರಣ ಬಡವನೊಬ್ಬನ ಪ್ರೇಮ ಸಾಹಸಗಳಿಗೆ ಅಷ್ಟೇನೂ ಕಿಮ್ಮತ್ತಿಲ್ಲವೆಂಬುದನ್ನು ವಾಚಿನ ಪ್ರಕರಣ ಸಾಕ್ಷಿ ನೀಡಿತ್ತು. ಇಂತಹ ದಿನಗಳಲ್ಲೇ ನನ್ನ ಭಾಗ್ಯದ ಬಾಗಿಲು ತೆರೆದಂತೆ ಕೆ.ಪಿ.ಎಸ್ಸಿ. ಎಕ್ಸಾಂ ಪಾಸ್ ಆಗಿ ಕ್ಲರ್ಕ್ ಪೋಸ್ಟ್‌ಗೆ ಬಂದಾಗ ಪಕ್ಕೆಗಳಿಗೆ ರೆಕ್ಕೆ ಬಂದ ಅನುಭವ. ಚಾಮುಂಡಿ ಸ್ವೀಟ್ಸ್‌ಗೆ ನುಗ್ಗಿ ಸ್ವೀಟ್ಸ್ ಕೊಂಡು ಅವಳ ಮನೆಗೇ ಹೋಗಿ ಗುಡ್‌ನ್ಯೂಸ್ ತಿಳಿಸಿ, ಸ್ವೀಟ್ ಪ್ಯಾಕೇಟ್ ಕೊಟ್ಟು ಇಷ್ಟಗಲ ನಕ್ಕು ಬೀಗಿದಾಗ ಅವಳ ಮುಖದಲ್ಲಾವ ಸಂಭ್ರಮವೂ ಕಾಣಲಿಲ್ಲ!

'ಖುಷಿಯಾಗಲಿಲ್ವಾ?' ಹಿಗ್ಗು ತಡೆಹಿಡಿಯಲಾಗದೆ ಕೇಳಿದೆ. 'ಏಕೆ? ಇದೇನು ಐಎಎಸ್ ಪೋಸ್ಟಾ?' ಅವರಮ್ಮನ ಪ್ರಶ್ನೆ. ನನ್ನಲ್ಲಿ ಉತ್ತರವೇ ಇರಲಿಲ್ಲ. 'ನೀವು ಪ್ಲೇಬ್ಯಾಕ್ ಸಿಂಗರ್ ಆಗ್ತೀರಾ ಅಂದ್ಕೊಂಡಿದ್ದೆ' ಇವಳ ನಿಟ್ಟುಸಿರು.

ನಾನೆಂದೂ ಹೀಗೆ ಚಿಂತಿಸಿದವನೇ ಅಲ್ಲ. ಸಿನಿಮಾ ಹಾಡುಗಳನ್ನು ಕಾಪಿ ಮಾಡಿ ಮಕ್ಕಿಕಾಮಕ್ಕಿ ಹಾಡುವಲ್ಲಿ ಸ್ವಂತ ಪ್ರತಿಭೆಯಾದರೂ ಏನಿದೆ ಎಂದರಿತವನು ನಾನು. 'ಟೈಲರಿಂಗ್ ಮಾಡಿ ಮನೆಗಾಗಿ ದುಡಿದ ಅಮ್ಮನಿಗೆ ಸಹಾಯವಾಗಲೆಂದು ಆರ್ಕೆಸ್ಟ್ರಾದಲ್ಲಿ ಹಾಡಿ